ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ  ದಿನಾಂಕ : DATE : 8/9/2020

# ಸಂಪುಟ ಪುನಾರಚನೆ ಸುಳಿವು ನೀಡಿದ ಸಿಎಂ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 8-9-2020

ಸೆ.21ರಿಂದ ಆರಂಭವಾಗುವ ಮಳೆಗಾಲದ ಅಧಿವೇಶನದಲ್ಲಿ ಪ್ರತಿಪಕ್ಷದಿಂದ ಎದುರಾಗಬಹುದಾದ ದಾಳಿಯನ್ನು ಸಮರ್ಥವಾಗಿ ಮೆಟ್ಟಿನಿಲ್ಲಲು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸಂಪುಟ ಸಹೋದ್ಯೋಗಿಗಳನ್ನು ಸಜ್ಜುಗೊಳಿಸಲು ಕರೆದಿದ್ದ ಮಹತ್ವದ ಸಭೆಯಲ್ಲಿ ಸಂಪುಟ ಪುನಾರಚನೆ ಬಗ್ಗೆ ಸೂಚ್ಯವಾಗಿ ಸುಳಿವು ಬಿಟ್ಟುಕೊಟ್ಟಿದ್ದಾರೆ.



ಬೆಂಗಳೂರಿನ ಮಯ್ಯಾಸ್ ಹೋಟೆಲ್‌ನಲ್ಲಿ ಯಡಿಯೂರಪ್ಪ ಸೋಮವಾರ ಉಪಹಾರ ಸವಿದರು.

ಸಂಪುಟ ಸಭೆ ಹೊರತಾಗಿ ಸಚಿವರೊಂದಿಗೆ ಮೊದಲ ಬಾರಿಗೆ ಒಟ್ಟಾಗಿ ಸೋಮವಾರ ಔಪಚಾರಿಕ ಸಭೆ ನಡೆಸಿದ ಮುಖ್ಯಮಂತ್ರಿ ಬಿಎಸ್‌ವೈ, ಸಹೋದ್ಯೋಗಿಗಳನ್ನು ತಮ್ಮ ಗೃಹ ಕಚೇರಿಗೆ ಆಹ್ವಾನಿಸಿ ಆಂತರಿಕ ಸಣ್ಣಪುಟ್ಟ ವೈಮನಸ್ಯವನ್ನು ಸರಿಪಡಿಸಲು ಮುಂದಡಿ ಇಟ್ಟರು.

ಇದೇ ವೇಳೆ ಸಂಪುಟದಲ್ಲಿನ ಖಾಲಿ ಸ್ಥಾನದ ಭರ್ತಿ ಕುರಿತೂ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಸಂಪುಟದಲ್ಲಿನ ಖಾಲಿ ಸ್ಥಾನ ಭರ್ತಿ ಮಾಡಿಕೊಳ್ಳಲು ಒತ್ತಡವಿದೆ. ನಮ್ಮ ಕರ್ತವ್ಯವೂ ಇದೆ. ವರಿಷ್ಠರು ಹೇಗೆ ತೀರ್ಮಾನ ಮಾಡುತ್ತಾರೋ ಹಾಗೆ ಎಲ್ಲರೂ ನಡೆದುಕೊಳ್ಳೋಣ. ಯಾರಿಗೇ ಅವಕಾಶ ಸಿಕ್ಕರು ಅಥವಾ ಯಾರೇ ಅವಕಾಶ ಕಳೆದುಕೊಂಡರೂ ಸಂಯಮದಿಂದ ಇರೋಣ ಎಂದು ಸಿಎಂ ಹೇಳಿದ್ದಾರೆನ್ನಲಾಗಿದೆ.

ಸೆ.21ರೊಳಗೆ ಸಂಪುಟ ಭರ್ತಿ ಪ್ರಕ್ರಿಯೆ ನಡೆಯುವ ಸಾಧ್ಯತೆ ಇದ್ದು, ಈ ಹಂತದಲ್ಲಿ ಸಿಎಂ ಹೇಳಿಕೆ ಹಲವು ಸಚಿವರ ಕಿವಿಗೆ ಕಾಸಿದ ಬಿಸಿ ಸೀಸ ಸುರಿದಂತಾಗಿದೆ. ಸಂಪುಟದಲ್ಲಿರುವ ಕೆಲವು ಹಾಲಿ ಸಚಿವರನ್ನು ಕೈಬಿಡಬಹುದೇ ಎಂಬ ಚರ್ಚೆಯೂ ನಡೆದಿದೆ.

ಇನ್ನು ಈ ಸಭೆಯಲ್ಲಿ ಶಾಸಕರ ವಿಚಾರ ಚರ್ಚೆಗೆ ಬಂದಿದೆ. ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸಚಿವರಿಗೆ ಸೂಚಿಸಿದ್ದು, ಸಾಧ್ಯವಾದಷ್ಟು ಶಾಸಕರ ಕೆಲಸಗಳನ್ನು ಮಾಡಿಕೊಡಲು ಆದ್ಯತೆ ನೀಡಿ ಎಂದು ಸಿಎಂ ಹೇಳಿದ್ದಾರೆ.

ಉಳಿದಂತೆ ಅಧಿವೇಶನದ ಬಗ್ಗೆ ಚರ್ಚೆ ನಡೆದಿದೆ. ಅಧಿವೇಶನದಲ್ಲಿ ಪ್ರತಿಪಕ್ಷ ಹೆಣೆಯುವ ಬಲೆಗೆ ಯಾವುದೇ ಕಾರಣಕ್ಕೂ ಸಿಲುಕದೇ ಪಾರಾಗುವ ನಿಟ್ಟಿನಲ್ಲಿ ಎಲ್ಲಾ ಸಚಿವರು ಸರ್ವ ಸನ್ನದ್ಧರಾಗಿರಬೇಕು, ಪ್ರತಿಪಕ್ಷದವರು ಎಳೆಎಳೆಯಾಗಿ ಟೀಕಿಸಿ ದಾಖಲೆ ನಿರ್ಮಿಸಲು ಪ್ರಯತ್ನಿಸುತ್ತಾರೆ, ಇದಕ್ಕೆ ಅವಕಾಶ ಕೊಡಬಾರದು. ಇರುವ ದಾಖಲೆಗಳನ್ನು ಮುಂಚಿತವಾಗಿ ಸಿದ್ಧವಾಗಿಟ್ಟುಕೊಂಡು ತಕ್ಕ ಉತ್ತರ ನೀಡಬೇಕೆಂದು ತಾಕೀತು ಮಾಡಿದ್ದಾರೆ.ಆರೋಗ್ಯ ಇಲಾಖೆಯ ಖರೀದಿ ಪ್ರಕರಣದಲ್ಲಿ ಪ್ರತಿಪಕ್ಷ ಜಿಗುಟು ಪ್ರದರ್ಶಿಸಬಹುದು, ಈ ವಿಚಾರದಲ್ಲಿ ಎಲ್ಲ ಸಚಿವರೂ ಶಾಸಕರು ಒಗ್ಗಟ್ಟಾಗಿ ಎದುರಿಸಬೇಕು. ಡಿಜೆ ಹಳ್ಳಿ ಘಟನೆ ಮತ್ತು ಡ್ರಗ್ಸ್ ಪ್ರಕರಣದಲ್ಲಿ ಪ್ರತಿಪಕ್ಷ ಮಾಡುವ ಟೀಕೆ ಟಿಪ್ಪಣಿಯನ್ನು ಸ್ವೀಕರಿಸಿ, ಸೂಕ್ತ ಪ್ರತಿಕ್ರಿಯೆ ನೀಡಬೇಕೆಂದು ಸೂಚಿಸಿದ್ದಾರೆ.

ಜಿಎಸ್‌ಟಿ ನಷ್ಟದಿಂದ ರಾಜ್ಯಕ್ಕೆ ಬರಬೇಕಾದ ಆದಾಯ ಕುಂಠಿತವಾಗಿದೆ, ಸರ್ಕಾರ ಸಾಲ ಮಾಡಿ ಪರಿಸ್ಥಿತಿ ನಿಭಾಯಿಸಬೇಕಿದೆ. ಹೀಗಾಗಿ ಹೆಚ್ಚು ಆರ್ಥಿಕ ಹೊರೆಯಾಗುವಂತಹ ಪ್ರಸ್ತಾವನೆ ಕಳಿಸದಂತೆ ಸಹೋದ್ಯೋಗಿಗಳಿಗೆ ಸಲಹೆ ನೀಡಿದರು ಎನ್ನಲಾಗಿದೆ. ಸಚಿವರಾದ ಕೆ.ಎಸ್.ಈಶ್ವರಪ್ಪ, ಶಶಿಕಲಾ ಜೊಲ್ಲೆ, ಶಿವರಾಂ ಹೆಬ್ಬಾರ್ ಕರೊನಾ ಕಾರಣಕ್ಕೆ ಸಭೆಯಿಂದ ದೂರ ಉಳಿದರು.